- - ಅಸಲು ದಾವೆ ಸಂ**: 06/2023** ಪಿ .ಡಬ್ಲು **-2**

**ದಿ: 05-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ಎಮ್.ಎಮ್. ವಕೀಲರಿಂದ: -**

1. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಗೊತ್ತಿದೆ. ಅದರಲ್ಲಿರುವ ವಿಷಯಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಈ ದಾವೆಯನ್ನು ರಘೋತ್ತಮಾಚಾರ್ಯ ಮತ್ತು ರಾಘವೇಂದ್ರಾಚಾರ್ಯ ಇವರು ವಾಸಪ್ಪಯ್ಯ ಮತ್ತು ಕೃಷ್ಣಾ ಚಾರ್ಯ ಇವರ ಮೇಲೆ ಮಾಡಿರುತ್ತಾರೆ. ಇವರು

ಒಬ್ಬರಿಗೊಬ್ಬರು ಏನಾಗಬೆಕೆಂದು ನನಗೆ ಗೊತ್ತಿಲ್ಲ. 1ನೇ ವಾದಿಯ ತಂದೆಯ ಹೆಸರು ಭೀಮಸೇನಾಚಾರ್ಯ ತಾಯಿ ಹೆಸರು ಕುಸುಮಾಬಾಯಿ ಇರುತ್ತದೆ ಅವರ ತಂದೆ 6 ವರ್ಷಗಳ ಹಿಂದೆ ಮತ್ತು ಅವರ ತಾಯಿ 7 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಬೀಮಸೇನಾಚಾರ್ಯ ಇವರಿಗೆ ವಾದಿಯರು ಮತ್ತು 1ನೇ ಪ್ರತಿವಾದಿ ಮಕ್ಕಳಾಗಿರುತ್ತಾರೆ. ಅವರಿಗೆ ಹೆಣ್ಣು ಮಕ್ಕಳು ಇದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. 1ನೇವಾದಿಯ ತಾತನ ಹೆಸರು ಹಳ್ಳಪ್ಪಾಚಾರ್ಯ ಅವರು ಯಾವಾಗ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ಹಳ್ಳಪ್ಪಾಚಾರ್ಯ ಇವರ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ಹಳ್ಳಪ್ಪಾಚಾರ್ಯ ಇವರಿಗೆ ಎಷ್ಟು ಜನ ಅಣ್ಣ ತಮ್ಮಂದಿರಿದ್ದರು ನನಗೆ ಗೊತ್ತಿಲ್ಲ. ಹಳ್ಳಪ್ಪಾಚಾರ್ಯ ತಂದೆಯ ಹೆಸರು ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿಯ ಗಂಡನ ಹೆಸರು ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿ 2ನೇ ಪ್ರತಿವಾದಿಯ ಮಗನಾಗಬೇಕು. 2 ಮತ್ತು 3ನೇ ಪ್ರತಿವಾದಿಯರ ಕುಟುಂಬದ ಬಗ್ಗೆ ನನಗೆ ಏನೂ ಗೊತ್ತಿರುವುದಿಲ್ಲ.

2. ವಾದಿಯರು ಮತ್ತು 1ನೇ ಪ್ರತಿವಾದಿಯ ಆಸ್ತಿಯನ್ನು 2 ಮತ್ತು 3ನೇ ಪ್ರತಿವಾದಿಯರು ಮಾಡಿಕೊಂಡಿರುತ್ತಾರೆ ಎಂದು ಈ ದಾವೆಯನ್ನು ಸಲ್ಲಿಸಿರುತ್ತಾರೆ. ಈ ದಾವೆಯನ್ನು 3 ಹೊಲಗಳ ಮೇಲೆ ಸಲ್ಲಿಸಿರುತ್ತಾರೆ ಅವುಗಳ ಸ ನಂ 19/1, 19/2, ಮತ್ತು ಸ ನಂ 21 ಆಗಿರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ 3 ಹೊಲಗಳ ಸರ್ವೆ ನಂಬರ್ ಮೇಲೆ ದಾವಾ ಸಲ್ಲಿಸಿದ್ದಾರೆ ಎಂದು ಹೇಳಿ ಬರೆಸಿದ್ದೇನೆ. ಸರ್ವೆ ನಂಬರ್ 19/1, ಇದು ವಿಸ್ತೀರ್ಣ 26 ಗುಂಟೆ ಇರುತ್ತದೆ. ಸ ನಂ 19/2, ವಿಸ್ತೀರ್ಣ 02 ಎಕರೆ 25 ಗುಂಟೆ ಇರುತ್ತದೆ. ಸರ್ವೆ ನಂಬರ್ 21, 01 ಎಕರೆ 12 ಗುಂಟೆ ಇರುತ್ತದೆ. ಸರ್ವೆ ನಂಬರ್ 19 ರ ಒಟ್ಟು ವಿಸ್ತೀರ್ಣ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 19 ರಲ್ಲಿ 3 ಪಟ್ಟಿಗಳಾಗಿರುತ್ತವೆ. ಶಿವರಡ್ಡಿ, ಕೃಷ್ಣಾಚಾರ್ಯ ಮತ್ತು ಪ್ರತಿವಾದಿ 2 ಅಥವಾ 3 ಇವರ ಒಂದು ಪಟ್ಟಿ ಇರುತ್ತದೆ. ಸರ್ವೆ ನಂಬರ್ 21 ರ ಒಟ್ಟು ವಿಸ್ತೀರ್ಣ ಎಷ್ಟು ಇದೆ ಎಂದು ಗೊತ್ತಿಲ್ಲ. ಸರ್ವೆ ನಂಬರ್ 21 ರಲ್ಲಿ 03 ಪಟ್ಟಿಗಳಾಗಿರುತ್ತವೆ. ಶಿವಶರಣರಡ್ಡಿ ಅಂದರೆ ನಾನೆ ಮತ್ತು ಪ್ರತಿವಾದಿ 2 ಅಥವಾ 3 ಇವರ ತಲಾ ಒಂದೊಂದು ಪಟ್ಟಿಗಳು

ಇರುತ್ತವೆ. ಪ್ರತಿವಾದಿಯರ ಹೆಸರಿನಲ್ಲಿರುವ ಪಟ್ಟಿಗಳು ಅವರ ಹಿರಿಯರಿಂದ ಬಂದಿದ್ದಾವೆ ಎಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ.

3. ದಾವಾ ಆಸ್ತಿಗಳ ಪೈಕಿ ಸ ನಂ 19 ರ ಒಂದು ಪಟ್ಟಿ, ಸ ನಂ 21 ರಲ್ಲಿ ಎರಡು ಪಟ್ಟಿ ಮೂಲತ: ವಾಸಪ್ಪಯ್ಯ ತಂದೆ ವೆಂಕಟಪ್ಪಯ್ಯ ದೇವರು ಇವರಿಗೆ ಸೇರಿದ್ದು ಎಂದರೆ ಸಾಕ್ಷಿಯು ಸ ನಂ 21 ರಲ್ಲಿ ಒಂದು ಪಟ್ಟಿ ಸೇರಿದೆ ಎನ್ನುತ್ತಾರೆ. ವಾಸಪ್ಪಯ್ಯ ದೇವರು ಇವರಿಗೆ ಎಷ್ಟು ಆಸ್ತಿಗಳು ಇದ್ದವು ಗೊತ್ತಿದೆಯಾ ಎಂದರೆ ಸಾಕ್ಷಿಯು ಈ 03 ಸರ್ವೆ ನಂಬರ್ ಗಳನ್ನು ಬಿಟ್ಟು ಬೇರೆ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ವಾಸಪ್ಪಯ್ಯ ದೇವರು ಪ್ರತಿವಾದಿ ಸಂಖ್ಯೆ 3 ರವರ ತಾತಾ ಭೀಮಪ್ಪಯ್ಯ ದೇವರು ಇವರ ತಂದೆಯಾಗಬೇಕೆಂದರೆ ನನಗೆ ಗೊತ್ತಿಲ್ಲ. ವಾಸಪ್ಪಯ್ಯ ದೇವರು ತರುವಾಗಯ ಭೀಮಪ್ಪಯ್ಯ ದೇವರು ಮೇಲೆ ಹೇಳಿದ ಆಸ್ತಿಗಳ ಮಾಲೀಕರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಭೀಮಪ್ಪಯ್ಯ ದೇವರು ಇವರಿಗೆ ವೆಂಕಟಪ್ಪಯ್ಯ ದೇವರು ಒಬ್ಬರೆ ಮಗನಾಗಿದ್ದು ಇವರ ಒಬ್ಬನೇ ಮಗ 3ನೇ ಪ್ರತಿವಾದಿಯಾಗಿರುತ್ತಾರೆಂದರೆ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿ ವೆಂಕಟಪ್ಪಯ್ಯ ದೇವರು ಇವರ ಪತ್ನಿಯಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಕುಟುಂಬದ ಬಗ್ಗೆ ಮತ್ತು ದಾವಾ ಆಸ್ತಿಗಳ ಬಗ್ಗೆ ನಿಮಗೆ ಏನೂ ಮಾಹಿತಿ ಇಲ್ಲದಿದ್ದರೂ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ